ಉ) ಹಾಗಿದ್ದಲ್ಲಿ ಈ ಅಪಘಾತ ಮತ್ತು ತೊಂದರೆಗಳನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಊ) ದಾವಣಗೆರೆ–ಹರಿಹರ ಹೊರವಲಯದಿಂದ ಹೋಗುವ ಳನೇ ರಾಷ್ಟ್ರೀಯ ಹೆದ್ದಾರಿಯನ್ನು ಇನ್ನೆಷ್ಟು ದಿನಗಳಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಮಾಡಿಕೊಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾರ್ಮಿಕ ಮತ್ತು ನೀರಾವರಿ ಸಚಿವರು).—

ಅ) ಆರು ವರ್ಷಗಳಾದವು.

ಆ) ಇಲ್ಲಿಯವರೆಗೆ ೨೨೮, ೮೮, ೫೮೨ ರೂ.ಗಳು ಖರ್ಚಾಗಿವೆ.

ಇ) ಈ ರಸ್ತೆಯಲ್ಲಿ ಒಂದು ರೈಲ್ವೆ ಮೇಲುಸೇತುವೆ ಮತ್ತು ಒಂದು ಸಬ್‌ವೇ ಸಹ ಆಗಬೇಕಾಗಿರುವುದರಿಂದ, ಸಂಚಾರಕ್ಕೆ ಬಿಡಲು ಅಡಚಣೆಯಾಗಿದೆ.

ಈ) ಬಂದಿದೆ.

ಉ) ಆದಷ್ಟು ಬೇಗ, ಈ ಹೊರ ರಸ್ತೆಯನ್ನು ಪೂರ್ಣಗೊಳಿಸಿ ಸಂಚಾರಕ್ಕೆ ಬಿಟ್ಟುಕೊಡಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ.

ಊ) ೧೯೮೭ರ ಡಿಸೆಂಬರ್ ತಿಂಗಳ ಅಂತ್ಯದ ವೇಳೆಗೆ ಸಂಚಾರಕ್ಕೆ ಬಿಡುಗಡೆ ಮಾಡಲು ನಿರೀಕ್ಷಿಸಲಾಗಿದೆ.

ಹೊಸದಾಗಿ ಆಂಗ್ಲ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ.

೧೫೯. ಶ್ರೀ ರೋಷನ್ ಬೇಗ್(ಶಿವಾಜಿ ನಗರ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬–೮೭ನೇ ಸಾಲಿಗೆ ಹೊಸದಾಗಿ ಆಂಗ್ಲ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಲು ಬಂದ ಅರ್ಜಿಗಳೆಷ್ಟು (ಜಿಲ್ಲಾವಾರು ಸಂಖ್ಯೆಗಳನ್ನು ಒದಗಿಸುವುದು)

ಆ) ಹಾಗಿದ್ದಲ್ಲಿ ಅರ್ಜಿಗಳು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿವೆಯೇ ಅಥವಾ ತಿರಸ್ಕೃತವಾಗಿವೆಯೇ ?

ಇ) ಆಂಗ್ಲ ಮಾಧ್ಯಮದ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಯಾವುದಾದರೂ ನೀತಿ ನಿರೂಪಕ ತೀರ್ಮಾನಗಳನ್ನು ಸರ್ಕಾರ ತೆಗೆದುಕೊಂಡಿದೆಯೇ ?

ಈ) ಹಾಗಾದರೆ, ತೆಗೆದುಕೊಂಡ ನೀತಿ ನಿರೂಪಕ ತೀರ್ಮಾನವೇನು ?

ಶ್ರೀ ಬಿ. ಸೋಮಶೇಖರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೮೮ (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ಸರ್ಕಾರದ ಇತ್ತೀಚಿನ ನೀತಿ, ನಿರೂಪಕ ತೀರ್ಮಾನದ ಮೇರೆಗೆ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಇ) ತೆಗೆದುಕೊಂಡಿದೆ.

ಈ) ೧೯೮೭–೮೮ನೇ ಸಾಲಿಗೆ ರಾಜ್ಯದಲ್ಲಿ ಯಾವುದೇ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆಗಳನ್ನು ತೆರೆಯಬಾರದೆಂಬ ನಿಲುವನ್ನು ಸರ್ಕಾರ ತೆಗೆದುಕೊಂಡಿದೆ.

1986-87ನೇ ಸಾಲಿಗೆ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಲಂ ಕೋರಿ ಬಂದ ಅರ್ಜಿಗಳ ಜಿಲ್ಲಾವಾರು ತ:ಖ್ತೆ.

		ಪ್ರಸ್ತಾವನೆಗಳ ಸಂಖ್ಯೆ
೧)	ಬೆಂಗಳೂರು ಉತ್ತರ ಜಿಲ್ಲೆ	೨೦
೨)	ಬೆಂಗಳೂರು ದಕ್ಷಿಣ ಜಿಲ್ಲೆ	೩೬
೩)	ಬೆಂಗಳೂರು ಗ್ರಾಮಾಂತರ ಜಿಲ್ಲೆ	೧
೪)	ತುಮಕೂರು	೨
೫)	ಕೋಲಾರ	೨
೬)	ಚಿತ್ರದುರ್ಗ	೪
೭)	ಶಿವಮೊಗ್ಗ	೨
೮)	ಮೈಸೂರು	೨
೯)	ಮಂಡ್ಯ	—
೧೦)	ಹಾಸನ	೪
೧೧)	ಕೊಡಗು	೧
೧೨)	ದಕ್ಷಿಣ ಕನ್ನಡ	೨
೧೩)	ಚಿಕ್ಕಮಂಗಳೂರು	೨
೧೪)	ಬೆಳಗಾಂ	೩
೧೫)	ಬಿಜಾಪುರ	೨
೧೬)	ಧಾರವಾಡ	೨
೧೭)	ಉತ್ತರ ಕನ್ನಡ	೧
೧೮)	ಗುಲ್ಬರ್ಗ	೧
೧೯)	ಬೀದರ್	—
೨೦)	ರಾಯಚೂರು	೧
೨೧)	ಬಳ್ಳಾರಿ	—
		೮೮

ನೀರಾವರಿ ಯೋಜನೆಗಳಿಗೆ ಮೀಸಲಾಗಿಟ್ಟ ಒಟ್ಟಿ ಹಣ.

೨೪. ಶ್ರೀ ಕೆ. ಹೆಚ್. ಪಾಟೀಲ್(ಗದಗ).—ಮಾನ್ಯ ಲೋಪಯೋಗಿ ಮತ್ತು ನೀರಾವರಿ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ನೀರಾವರಿ ಯೋಜನೆಗಳಿಗೆ ಇದುವರೆವಿಗೆ ಮೀಸಲಾಗಿಟ್ಟ ಹಣ ಎಷ್ಟು ?

ಆ) ಕಾವೇರಿ ಮತ್ತು ಕೃಷ್ಣ ಕೊಳ್ಳಗಳಿಗೆ ಮತ್ತು ಅವುಗಳ ಅಭಿವೃದ್ಧಿ ಮಂಡಳಿಗಳಿಗೆ ಒದಗಿಸಿರುವ ಒಟ್ಟು ಹಣ ಎಷ್ಟು ?

ಇ) ಈ ಮಂಡಳಿಗಳಿಗೆ ನಿರ್ವಹಿಸಲಾಗಿರುವ ಕರ್ತವ್ಯ ಮತ್ತು ಪ್ರಕಾರ್ಯಗಳು ಏನು ?

ಈ) ಯೋಜನೆಗಳ ಪ್ರಗತಿ ಅನುಸೂಚಿಯ ಪ್ರಕಾರ ಇಲ್ಲದಿರುವುದು ನಿಜವೇ ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳು ಏನು ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಪ್ರಸ್ತುತ (೧೯೮೭-೮೮) ಸಾಲಿನಲ್ಲಿ ನೀರಾವರಿ ಯೋಜನೆಗಳಿಗೆ ನಿಗದಿಗೊಳಿಸಿರುವ ಹಣ ೩೧೮.೨೬ ಕೋಟಿ ರೂಪಾಯಿಗಳು.